


**ಕ್ರಿಕೆಟ್ ಎಂಬ ಜೂಜಾಟ!**
ಕ್ರಿಕೆಟ್ಟಾಟ'ದ ಸ್ಪಾಟ್ ಫಿಕ್ಸಿಂಗ್ ನೋಡಿದರೆ, ಈ ಆಟದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಿಲ್ಲ. ಇದೊಂದು ಅಸಹ್ಯದ ಆಟ! ಪ್ರವೀಣ ಕುಲಕರ್ಣಿ ಈ ಜೂಜಾಟವನ್ನು ಚೆನ್ನಾಗಿ ಪರಿಚಯಿಸಿದ್ದಾರೆ. ಕ್ರಿಕೆಟ್ ಬಗೆಗಿನ ಅತಿ ವ್ಯಾಮೋಹ ಒಳ್ಳೆಯದಲ್ಲ ಎಂಬುದನ್ನೂ ಫಿಕ್ಸಿಂಗ್‌ನ ಮೋಸಗಾರರು ಮನಗಾಣಿಸಿದ್ದಾರೆ.

-ಬೇಲೂರು ದ.ಶಂ.ಪ್ರಕಾಶ್, ಮೈಸೂರು/ ವಿ.ಅರ್ಜುನ್, ಮಂಡ್ಯ/ ತಂ.ರಾಮು, ಹರಪನಹಳ್ಳಿ

**ಕಣ್ಣು!**
'ಗಾಯನ ಯೋಗಿ' (ಸಿದ್ಧಯ್ಯ ಹಿರೇಮಠ) ಪಂ. ಪುಟ್ಟರಾಜ ಗವಾಯಿ ಸ್ವತಃ ಕುರುಡರಾಗಿಯೂ ಸಮಾಜಕ್ಕೆ ಕಣ್ಣಾದವರು; ಅಮೃತದ ಹಣ್ಣಾದವರು! (ಬಹುಮಂದಿ ಕಣ್ಣಿದ್ದೂ ಕುರುಡರು: 'ದಯೆಯಿಲ್ಲದವನ ಕಣ್ಣೇಂ ಪುಣ್ಣೇಂ?')

-ಸಿ.ಪಿ.ಕೆ., ಮೈಸೂರು

**ಅನಾಥರು ಅಂಧರು**
ಅಂಧರ ಬಾಳಿನ ಆಶಾಕಿರಣವಾಗಿದ್ದ ಪಂಡಿತ್ ಪುಟ್ಟರಾಜ ಗವಾಯಿಗಳ ಅಗಲಿಕೆಯಿಂದ ಗುರುಗಳಿಲ್ಲದ ಆಶ್ರಮದಲ್ಲಿ ಓದುತ್ತಿರುವ ಅಂಧರು ನಿಜಕ್ಕೂ ಅನಾಥರಾಗಿದ್ದಾರೆ. ಪುಟ್ಟ ರಾಜರು ಮತ್ತೆ ಈ ನಾಡಲ್ಲಿ ಹುಟ್ಟಿಬರಲಿ. ಬಹುಮುಖ ಪ್ರತಿಭೆಯನ್ನು ಹೊಂದಿದ್ದ ಗವಾಯಿಗಳ ಸಂಗೀತಜ್ಞಾನ ಅಮೋಘವಾದದ್ದು.

-ರವೀಂದ್ರನಾಥ. ಶಿ. ಯಡಹಳ್ಳಿ, ಬೀಳಗಿ/ ಚಂದ್ರು ನರೇಗಲ್‌ಮಠ, ಹುಬ್ಬಳ್ಳಿ

**ಜನಪ್ರಿಯ ಪ್ರಾಣಾಯಾಮ**
ಈಗೀಗ ತುಂಬಾ ಜನಪ್ರಿಯವಾಗುತ್ತಿರುವ 'ಪ್ರಾಣಾಯಾಮ' ಕುರಿತಂತೆ ಲೇಖನಗಳು ಸಾಕಷ್ಟು ಮಾರ್ಗದರ್ಶನ ಮಾಡಿವೆ.

-ರಾಜೇಂದ್ರ ಕುಮಾರ್, ದೊಡ್ಡಬಳ್ಳಾಪುರ

**ವಿಡಂಬನಾತ್ಮಕ ಕಥೆ**
ದಾದೂರಾಮ್ ಶರ್ಮರ ಹಿಂದಿ ಕತೆ 'ಬೋಳು ತಲೆಯವನ ಕರಾಮತ್ತು' (ಕನ್ನಡಕ್ಕೆ: ಡಿ.ಎನ್. ಶ್ರೀನಾಥ್). ಪ್ರೇಮಚಂದ್‌ರ ಅನೇಕ ಕತೆಗಳಂತೆ ಸ್ವಾರಸ್ಯಕರವಾದ ವಿಡಂಬನಾತ್ಮಕ ಕತೆ.

-ಎಚ್.ಎಂ. ಕಾಳಮ್ಮ, ಬಸರಕೋಡು

**ತರಾಸು ನೆನಪು**
'ಆರು ಮುನಿದು ನಮ್ಮನ್ನೇನು ಮಾಡುವರು?' ಬಿ.ಎಲ್.ವೇಣು ಅವರ ಕಥೆ ಓದಿದಾಗ ದುರ್ಗದ ಬಗ್ಗೆ ತ.ರಾ.ಸು. ಕಾದಂಬರಿಗಳನ್ನು ಓದುತ್ತಿದ್ದ ಅಂದಿನ ದಿನಗಳು ನೆನಪಿಗೆ ಬಂದವು. ಇಂಥಹ ಚಾರಿತ್ರಿಕ ಕಥೆಗಳು ಮತ್ತಷ್ಟು ಬರಲಿ.

-ತರಂಗಿಣಿ, ತುಮಕೂರು

**ಮಾನವ ಜನ್ಮ ದೊಡ್ಡದು**
ವಿಚಾರ ಲಹರಿಯಲ್ಲಿ ಶಿಕಾಕು ಬರಹ 'ವ್ಯರ್ಥ ವಲ್ಲವೆ, ಜನ್ಮ ವ್ಯರ್ಥವಲ್ಲವೇ?' ಚೆನ್ನಾಗಿದೆ. ಆದರೆ ದಾಸರೇ ಇನ್ನೊಂದು ಮಾತನ್ನು ಹೇಳಿದ್ದಾರೆ: 'ಮಾನವ ಜನ್ಮ ದೊಡ್ಡದು, ಘಾಸಿ ಮಾಡಿ ಕೊಳ್ಳಲು ಬೇಡಿ ಹುಚ್ಚಪ್ಪಗಳಿರಾ!' ಎಂದು. ಇದನ್ನು ಮರೆತರೆ ಹೇಗೆ?

-ಕೊಹಿಮ, ಬಸರಕೋಡು

**ವಿಚಾರ ಪೂರಿತ**
ವೈನತೇಯರ ಲೇಖನ 'ಸ್ವಸ್ಥಾನ ಪ್ರಜ್ಞೆ' ವಿಚಾರಪೂರಿತವೂ, ಅರ್ಥಗರ್ಭಿತವಾಗಿಯೂ ಮೂಡಿಬಂದಿತು.

-ನೆ.ಸು. ಆನಂದ್, ಕತ್ತರಗುಪ್ಪ

**ಅಲ್ಲೂ ಒಂದು ಸೇಲಮ್**
'ಅಲ್ಲೂ ಒಂದು ಸೇಲಮ್!' ತಮಿಳುನಾಡು ಸೇಲಮ್‌ನಿಂದ ಅಮೆರಿಕದ ಸೇಲಮ್, ಏಕೈಕ ಹೆಸರಿನ ಎರಡು ದೇಶಗಳ ಊರು. ಭಾರೀ ವಿಚಿತ್ರ.

-ಎಚ್. ಆನಂದ್‌ಕುಮಾರ್, ಚಿತ್ರದುರ್ಗ

**ಶ್ರೀಗಂಧ ಹೆಚ್ಚು ಬೆಳೆಯಿರಿ**
ವಸಂತ ಮಾಲವಿಯವರು ಶ್ರೀಗಂಧದ ಬಗ್ಗೆ ಚಿತ್ರ ಸಮೇತ ಸವಿಸ್ತಾರವಾಗಿ ಬರೆದದ್ದನ್ನು ಓದಿ, ಇತ್ತೀಚೆಗೆ ರೈತರು ಇದನ್ನು ತಮ್ಮ ಜಮೀನಿನಲ್ಲಿ ಬೆಳೆದು ಆರ್ಥಿಕ ಲಾಭ ಗಳಿಸಬಹುದು ಎಂಬುದರಲ್ಲಿ ಸಂಶಯವೇ ಇಲ್ಲ.

-ಪಿ.ಎನ್. ಶ್ರೀವತ್ಸ, ಬೆಂಗಳೂರು/ ನೆ.ಲ.ರಾಂ, ಬೆಂಗಳೂರು

**ಮಾತನಾಡುವ ಮರ?**
ಕೆ.ಪಿ.ಸತ್ಯನಾರಾಯಣರ 'ಅ-ಮರ ಕಲಾಕೃತಿ' ಚಿಕ್ಕದಾದರೂ ಚೊಕ್ಕ ಚಿತ್ರ-ಲೇಖನ. ಕೆಲವೊಮ್ಮೆ ಕುದುರೆಯ ತಲೆಯಂತೆ, ಜಿರಾಫೆ ಯಂತೆ ಕಂಡರೆ, ಒಂದೆಡೆ ಆರ್ತನಾದ ಮಾಡು ವಂತೆ ಕಂಡಿತು. ತನ್ನ ಮೈ-ಕೈಗಳನ್ನೆಲ್ಲಾ ಕತ್ತಿ, ಚರ್ಮ ಸುಲಿದು ಜೀವ ತೆಗೆದು ಹೋದ ಮಾನವ ಮೃಗಗಳನ್ನು ಶಪಿಸುತ್ತಾ ನಿಂತಿರುವ ವೃಕ್ಷದೇವತೆ ಇವಳೇ ಇರಬಹುದೇ?

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ಮೈದುಂಬಿದ 'ಸುಧಾ'

ನಲವತ್ತೇಳನೇ ಸಂಪುಟ ಪೂರ್ಣಗೊಳಿಸುವತ್ತ ಧಾವಿಸುತ್ತಿರುವ 'ಸುಧಾ' ವಾರಪತ್ರಿಕೆ ಕನ್ನಡದ ಜನಪ್ರಿಯತೆಯ ಉತ್ತುಂಗಕ್ಕೆ ತಲುಪಿ, ನಂ. 1 ಮ್ಯಾಗಸಿನ್ ಆಗಿರುವುದು ಸುಮ್ ಸುಮ್ನೆ ಅಲ್ಲ. ಈ ಶಿಖರ ತಲುಪಲು 'ಎರಡು ತಲೆಮಾರು'ಗಳ ಶಿಖರ ಪತ್ರಕರ್ತರ ತಪಸ್ಸಿನ ಫಲ ಇದೆ. ಸುಂದರ 'ಸುಧಾ'ಳ ಮೊದಲ ಸಂಚಿಕೆಯಿಂದಲೂ ನಾನು ಒಬ್ಬ ಓದುಗ. ಆ ಕಾಲದಲ್ಲಿ (46 ವರ್ಷಗಳ ಹಿಂದೆ) ಇದರ ಮಾರಾಟದ ಮುಖ ಬೆಲೆ ಬರೀ ಒಂದು ರೂಪಾಯಿ. ಈಗಲೂ ಇಷ್ಟೆ ಪುಟಗಳ (80) ಅನ್ಯ ಪತ್ರಿಕೆಗಳ ಬೆಲೆ ರೂ. 15 ರಿಂದ ರೂ. 20ರವರೆಗಿದೆ. ಇಷ್ಟಿದ್ದೂ, 3.5 ಲಕ್ಷ ಓದುಗರ ಬೃಹತ್ ಸಂಖ್ಯೆ 'ಸುಧಾ' ಪಾಲಿಗಿದ್ದು ಕನ್ನಡ ವಾಚಕರ ಹೆಮ್ಮೆಯ ಕೈಗನ್ನಡಿ ಇದಾಗಿರುವುದು ಅಭಿಮಾನಪ್ರದ.

ಒಂದು ವಾರವೆಲ್ಲ ಓದಿದ್ದರೂ ಮುಗಿಸಲು ಸಾಧ್ಯವಾಗದಷ್ಟು 'ಐಟಂ'ಗಳು 'ಸುಧಾ'ಳ ಮೈ ತುಂಬಿಕೊಂಡಿರುತ್ತವೆ. ಒಂದಕ್ಕಿಂತ ಒಂದು ಆಸಕ್ತಿ ಕೆರಳಿಸುವಂತಿವೆ. ವರ್ಣಚಿತ್ರಗಳಂತೂ ಕಣ್ಮನಗಳನ್ನು ಹೃದಯಸ್ಥವಾಗುತ್ತವೆ.

-ಎಚ್.ಎಸ್. ಸೂರ್ಯನಾರಾಯಣ, ಕಡೂರು


